# ಆಕ್ಟೋಪಸ್

## ಅಷ್ಟಪದಿಗಳ ಆಸಕ್ತಿಕರ ಬದುಕು



ಸಮುದ್ರಜೀವಿಗಳಲ್ಲಿ ವಿಭಿನ್ನ ದೇಹ ರಚನೆಯಿಂದಲೇ ಗಮನಸೆಳೆವ ಜೀವಿ ‘ಆಕ್ಟೋಪಸ್’ (ಅಷ್ಟಪದಿ). ಇವುಗಳ ದೈಹಿಕ ರಚನೆ ಮಾತ್ರವಲ್ಲ, ಜೀವನವಿಧಾನದಲ್ಲೂ ಕುತೂಹಲಕರ ಸಂಗತಿಗಳಿವೆ.

■ ಸಂಗ್ರಹ: **ನವೀನ ಪ್ಯಾಟಿಮನಿ**

ಆಕ್ಟೋಪಸ್ ತಲೆಯನ್ನು Mantle ಎಂದು ಕರೆಯಲಾಗುತ್ತದೆ. ಇದರ ದೇಹ 8 ಬಾಹುಗಳಿಂದ ಕೂಡಿದ್ದು, ಇವುಗಳನ್ನು ಗ್ರಹಣಾಂಗಗಳು ಎಂದು ಕರೆಯಲಾಗುತ್ತದೆ. ಪ್ರತಿ ಬಾಹುವಿನಲ್ಲಿ ಸಣ್ಣ ಮೆದುಳುಗಳಿದ್ದು, ತಲೆಯಲ್ಲಿರುವ ಒಂದು ಮೆದುಳನ್ನು ಸೇರಿಸಿ ಒಟ್ಟು 9 ಮೆದುಳುಗಳನ್ನು ಆಕ್ಟೋಪಸ್ ಹೊಂದಿರುತ್ತದೆ. ಎಲ್ಲಾ ಪ್ರಮುಖ ಅಂಗಗಳು ತಲೆಗೆ ಸಂಪರ್ಕ ಹೊಂದಿರುತ್ತವೆ.



ಆಕ್ಟೋಪಸ್‌ಗಳ ಬಣ್ಣ ಮತ್ತು ಗಾತ್ರ ಇವುಗಳು ವಾಸಿಸುವ ಸುತ್ತಮುತ್ತಲಿನ ಪರಿಸರದ ಮೇಲೆ ಅವಲಂಬಿತ. ಸಾಮಾನ್ಯವಾಗಿ ಇವುಗಳ ತೂಕ 3ರಿಂದ 10 ಕೆ.ಜಿ., ದೇಹದ ಉದ್ದ 30ರಿಂದ 90 ಸೆ.ಮೀ.ವರೆಗೆ ಬೆಳೆಯಬಹುದು.

ಆಕ್ಟೋಪಸ್‌ಗಳು ಅಕಶೇರುಕಗಳು, ಅಂದರೆ ಮೂಳೆಗಳಿಲ್ಲದ ಪ್ರಾಣಿಗಳು. ಈ ಕಾರಣದಿಂದ, ಆಕ್ಟೋಪಸ್ ನೀರಿನಿಂದ ಹೊರತೆಗೆದಾಗ ಅದರ ಆಕಾರವನ್ನು ಕಳೆದುಕೊಳ್ಳುತ್ತದೆ.

ಅಷ್ಟಪದಿಗೆ ಮೂರು ಹೃದಯಗಳು ಇರುತ್ತವೆ ಮತ್ತು ಅವುಗಳ ರಕ್ತ ನೀಲಿ ಬಣ್ಣದ್ದಾಗಿದೆ. ರಕ್ತವು ತಾಮ್ರಸಹಿತ ಪ್ರೊಟೀನ್ ಹೊಂದಿರುವ ಹಿಮೋಸಯಾನಿನ್ ವರ್ಣದ್ರವ್ಯ ಹೊಂದಿದೆ. ಕಡಿಮೆ ತಾಪಮಾನದಲ್ಲಿ ದೇಹಕ್ಕೆ ಆಮ್ಲಜನಕವನ್ನು ಸಾಗಿಸಲು ತಾಮ್ರ ಕಬ್ಬಿಣಕ್ಕಿಂತ ಹೆಚ್ಚು ಪರಿಣಾಮಕಾರಿ.





ಆಕ್ಟೋಪಸ್ ಸದೃಢ ನರಮಂಡಲ ಹೊಂದಿದೆ. ಅಲ್ಪಾವಧಿಯ ಮತ್ತು ದೀರ್ಘಾವಧಿಯ ಸ್ಮರಣಶಕ್ತಿ ಬೆಳೆಸಿಕೊಳ್ಳುವ ಸಾಮರ್ಥ್ಯವೂ ಇದಕ್ಕಿದೆ. ತನ್ನನ್ನು ತಾನು ರಕ್ಷಿಸಿಕೊಳ್ಳಲು ತನ್ನ ಬಣ್ಣ ಮತ್ತು ಚರ್ಮದ ವಿನ್ಯಾಸವನ್ನು ಪರಿಸರದೊಂದಿಗೆ ಬೆರೆಯುವಂತೆ ಬದಲಾಯಿಸಬಲ್ಲದು, ಜೊತೆಗೆ ಅದೃಶ್ಯವಾಗಬಲ್ಲದು ಕೂಡ.

